Regd No. M 1299 SATYAVADI Founded 1917

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 31 ಸಂಚಿಕೆ 44] ಸೋಮವಾರ 24—11—47 [ಬಿಡಿ ಪ್ರತಿ 3 ಪೈ

ಸುದ್ದಿಗಳು

ಪಂ॥ ನೆಹರೂರವರು ಅಖಿಲ ಏಷ್ಯಾಕ್ಕೆ ಸೇರಿದವರೆಂದು ಇಂಡೋನೇಷಿಯಾ ಮುಖ್ಯಮಂತ್ರಿ ಪ್ರಶಂಸಿಸಿದಾರೆ.

ಂ ಂ

ಬೇಗಾಸೆರಾಯಿನ 18 — ಆಲೂಗೆಡ್ಡೆ ಬೆಲೆಯು ವಿಪರೀತವೆಚ್ಚಿದೆ ನಿನ್ನೆ ಮಣಕ್ಕೆ 70 ರೂಪಾಯಿನಂತೆ ಮಾರಲಾಯಿತು

ಂ ಂ

ನವದೆಹಲಿ .... ಭಾರತಕ್ಕೆ ಆಹಾರ ತುಂಬಿದ 48 ಹಡಗುಗಳು ಬರುವ ನಿರೀಕ್ಷಣೆ ಇದೆ

ಂ ಂ

ಕರಾಚಿ.... ಪಾಕಿಸ್ತಾನದಲ್ಲಿ ಅಂಚೆ ಚೀಟಿಗೆ ಅಭಾವವಾಗಿದೆಯೀಂತೆ

ಂ ಂ

ನ್ಯೂ ಆರ್ಲೆತ್ಸ್.... ಇನ್ನು 15 ವರ್ಷಗಳಲ್ಲಿ 3 ನೇ ಪ್ರಪಂಚ ಯುದ್ಧ ಖಂಡಿತವೆಂದು ವಾಲೆಸರ ಭವಿಷ್ಯವಾಣಿ.

Woodlands

ಯಶಸ್ವಿ 4 ನೇ ವಾರ

ಅಶೋಕಕುಮಾರ್

ವೀರಾ, ಪ್ಯಾರೊ, ಪಾತ್ರವಹಿಸಿರುವ

ಪಿ ಪಿಕಾರಿ ರಿ

(ಅನೋಖ ಹಿಂದಿ ಚಿತ್ರ)

Edited, Printed and Published by M S Krishna Rao at the Satyavadi Press Chamaraja Agahar Mysore.

ಲಾಟರಿಯಲ್ಲಿ ೧

ಬ್ರಿಟಿಷ್ ಸರಕಾರವು

1000 ಮಿಲಿಯ ಪೌಂಡು

ಎತ್ತಿ ಯೋಜನೆ ಹೂಡಿರುವುದೆಂದು ಲಂಡನ್ನಿನ ಒಂದು ವಾರಪತ್ರಿಕೆಯು ಪ್ರಕಟಿಸಿದೆ.

ಪಾಕಿಸ್ತಾನ ಸರಕಾರವು ಸೇನಾಬಿನ ಮೇಲೆ ಲಕ್ಷ್ಯತೆರಿಗೆ ಹಾಕಿರುವುದಕ್ಕೆ ಭಾರತ ಸರಕಾರ ಆಕ್ಷೇಪಣೆ ಎತ್ತಿದೆ

ಂ ಂ

1948 ರಲ್ಲಿ ಪಾಕಿಸ್ತಾನವು ಭಾರತಕ್ಕೆ ಸೇರುವುದೆಂದೂ ಜಿನ್ನಾರವರು ಮತ್ತೆ ಅಧಿಕಾರಕ್ಕೆ ಬರುವುದಿಲ್ಲವೆಂದೂ ಒಬ್ಬ ಸ್ವಪ್ನಸಿದ್ಧ ಜೋತಿಷ್ಯರು ಅಭಿಪ್ರಾಯ ಪಟ್ಟಿದಾರೆ.

ಂ ಂ

ಲಂಡನ್.... ರಕಜಕುಮಾರಿ ಎಲಿಜಬೆತ್‌ರವರ ವಿವಾಹದಲ್ಲಿ ಬಂದ ಉಡುಗೆರೆಗಳ ಲೆಕ್ಕ ಪ್ರೋಡಾ ಮಿಶಾರಿದೆ

At Opera
From 20—11—47

ಮೂಲಿತಿ — ಶಿವಭಾಗ್ಯಂ

ಎಸ್. ವಿ. ಸುಬ್ಬಯ್ಯ — ಸಂಭಯಾರ್

ಪಾತ್ರವಹಿಸಿರುವ

ಕಂಜನ್

ತಮಿಳು ಚಿತ್ರ — ಇದರ ಜೊತೆಯಲ್ಲಿ ಕೊಯಮತ್ತೂರಿನಲ್ಲಿ ಸ್ವತಂತ್ರ ದಿನಾಚರಣೆ ವತ್ತು ಮಹಾತ್ಮಾ ಗಾಂಧಿಯವರ ಸಜನ ಯಾತ್ರೆ ಫಲಿಂ ಸಜಾ ತೋರಿಸಲಾಗುತ್ತೆ.

ಈ ವಾರದ ಭವಿಷ್ಯ

(ಓಂ ಜೋತಿಷ್ಯರಿಂದ)

ಮೇಷ— ಕಷ್ಟಗಳು ಕಡಮೆಯಾಗುವುವು. ಮನಸ್ಸು ಶಾಂತವಾಗಿರುತ್ತೆ. ಆರ್ಥಿಕ ಸ್ಥಿತಿ ಉತ್ತಮ

ವೃಷಭ.... ಕೈಕೊಂಡ ಕಾರ್ಯಗಳು ಮೇರವೇರುವವು. ತಾಪತ್ರಯಗಳಾವುವೂ ಇರುವುದಿಲ್ಲ.

ಮಿಥುನ— ಆರ್ಥಿಕ ಸ್ಥಿತಿ ಉತ್ತಮ ಸನ್ಮಾನವು ದೊರಯಬಹುದು.

ಕರ್ಕಾಟಕ — ಮನೋಚ್ಚಂತೆ. ಆರ್ಥಿಕ ಮುಗ್ಗಟ್ಟಿರುವುದಿಲ್ಲ

ಸಿಂಹ— ಆರೋಗ್ಯಕ್ಕೆ ಧಕ್ಕೆ, ವ್ಯವಹಾರದಲ್ಲಿ ನೆಷ್ಟ. ಆರ್ಥಿಕ ಸ್ಥಿತಿ ಉತ್ತಮವಿರುವುದಿಲ್ಲ

ಕನ್ಯ— ಮಣ್ಣು ಹಿಡಿದರೂ ಚಿನ್ನವಾಗುವ ಯೋಗವಿದೆ

ತುಲ.... ಗ್ರಹಗತಿಗಳು ಅನುಕೂಲವಾಗಿವೆ. ಆರ್ಥಿಕ ಸ್ಥಿತಿ ಸಮರ್ಪಕವಾಗಿರುತ್ತದೆ

ವೃಶ್ಚಿಕ.... ಕೀರ್ತಿ ಧನಲಾಭವುಂಟು. ಆರೋಗ್ಯ ಉತ್ತಮ

ಧನಸ್ಸು .... ಆರ್ಥಿಕ ಸ್ಥಿತಿ ಸತು ಆರೋಗ್ಯ ಪರವಾ ಇಲ್ಲ

ಮಕರ.... ಮನಸ್ಸು ಬಂತೆಯಿಂದ ತಪಿಸುತ್ತಿರುತ್ತದೆ. ಹಣಕಾಸಿನ ಸ್ಥಿತಿ ಜೆನ್ನಾಗಿರುವುದಿಲ್ಲ

ಕುಂಭ .... ಮಿತ್ರರ ಸಹಾಯವುಂಟು, ಆರೋಗ್ಯ ಹಣ ಸ್ಥಿತಿ ಸೆಟ್ಟಗೆ

ಮೀನ .... ಆರ್ಥಿಕ ಸಹಾಯವಿರುತ್ತದೆ. ವ್ಯವಹಾರದಲ್ಲಿ ಬಯಂ

Save the Cow

॥ ವಂದೇ ಮಾತರಂ ॥

ಶ್ರೇಷ್ಠವಾದ

ರಾಜಪುರಂ ಹೊಗೇಸೊಪ್ಪಿನಿಂದ

— ತಯಾರಿಸಲ್ಪಟ್ಟದು —

ಕಾಂಗ್ರೆಸ್

(ರಿಜಿಸ್ಟರ್ಡ್)

ಮಂಗಳೂರು

ಬೀಡಿಗಳು

ಜೆ. ಎಸ್. ಟೊಬ್ಯಾಕೊ ವರ್ಕ್ಸ್

ಲಿಮಿಟೆಡ್, ಮೈಸೂರು

ಪಾಮರನ ವ್ಯಾಖ್ಯಾನ

ಸ್ವತಂತ್ರನೆಂದರೇನೋ ಮೊದಲು ಅರಿತಿರುವಿರಾ? ಯಾವನು ಜಯಿಸಿದ ಗಂಗೆಯಲ್ಲಿ ಅವನು ಇಳಿಯುಬಹುದೆಂದರ್ಥ. ಕಾಶ್ಮೀರಕ್ಕೆ ಸೇರಿದ್ದ 'ಚಿತ್ರಾಲ್' ಸಂಸ್ಥಾನವು ಕಾಶ್ಮೀರದೊಂದಿಗೆ ಮಂಗಳಸೂತ್ರವನ್ನು ಕಿತ್ತು ಹಾಕಿ ಪಾಕಿಸ್ತಾನಕ್ಕೆ 'ನಿಖಾ' ಆಗಿದೆಯಂತೆ. ಗುಜರಾತಿನಲ್ಲಿಯೂ ಜೂನಘಡ ಸಂಸ್ಥಾನಕ್ಕೂ ಪಾಕೀಸ್ತಾನಕ್ಕೂ ಸಮುದ್ರದ ಮೂಲಕ ದಾರಿಯಿರುವುದರಿಂದ ಪಾಕೀಸ್ತಾನಿನಲ್ಲಿ ಸೇರಬೇಕಾದಲ್ಲಿ ತಾನು ಮೊದಲು ಸಮುದ್ರದಲ್ಲಿ ಇಳಿಯಬೇಕಾಗಿರುವುದರಿಂದ ಜುನಘಡ ಜಹಗೀರುದಾರನು ಗಾಳಿಯಲ್ಲಿ ಹಾರುವ ಕಂಚಿಯಲ್ಲಿ ವಿಶ್ರಾಂತಿ ಭವನವನ್ನು ಕೊಂಡುಕೊಂಡು ಅಲ್ಲಿ ಸ್ವತಂತ್ರ ಸರಕಾರವನ್ನು ಸ್ಥಾಪಿಸುತ್ತಿರುವಂತೆ ತೀರಿಯಬಂದಿದೆ. ಹೈದರಾಬಾದು ನವಾಬರು ಕೂಡ ಯಾವುದೋ ಹಟವನ್ನು ಹಿಡಿದಿದ್ದಾರೆ. ಹೀಗೆ ಮುಸಲ್ಮಾನ್ರಲ್ಲಿ ಜಿನ್ನಾರು ನಮ್ಮ ಕಡೆ ಭಲ್ಯಗಳನ್ನು ತಯಾರು ಮಾಡುತ್ತಿದ್ದಾರೆ. ನಾವೂ ಕೂಡ ಇದಕ್ಕೆ ತಕ್ಕಂತೆ ಹೈದರಾಬಾದಿನಲ್ಲಿಯ ಅನಪರ್ತಿ, ಗದ್ವಾಲ್ ಸಂಸ್ಥಾನಗಳನ್ನು ಮೊದಲು ನಮ್ಮೊಳಗೆ ಸೇರಿಸಿಕೊಂಡು ವಿಲೀಟುರಿಯನ್ನು ಇಳಿಸಿದಲ್ಲಿ ಹೈದರಾಬಾದಾತನಿಗೂ ಕೂಡ ಒಪ್ಪಿಕೊಳ್ಳದಿದ್ದಲ್ಲಿ ಪಲಾಯನ ತಂತ್ರ ಒಪ್ಪಿಕೊಂಡಲ್ಲಿ ಪ್ರಜಾಸ್ವಾವಿಂಕ ಮಂತ್ರವನ್ನು ಪಠಣಮಾಡುತ್ತಾ ಕೊತು ಕೊಂಡಿರಲಿಕ್ಕೆ ಹೇಳಬಹುದು.

ಂ ಂ

ಪಾಕಿಸ್ತಾನದೊಂದಿಗೆ ಯುದ್ಧವು ತಪ್ಪುವುದಿಲ್ಲವೇ? ಇದಕ್ಕೆ ಉತ್ತರ ಬೇಕಾಗಿದ್ದಲ್ಲಿ ಪಂ॥ ನೆಹರೂರವರ ವೇಡಿಯೋ ಸ್ವಸರಂಗವನ್ನು ಓದಿ ಸದಾ ನಮಗೆ ದ್ರೋಹವಾಡಿದಲ್ಲಿ ನಾವೂ ಕೂಡ ಸ್ವಲ್ಪ ಜಾಗರೂಕತೆಯೊಂದಿಗೆ ಇಲ್ಲದಿದ್ದಲ್ಲಿ ಅದು ಪುರುಷ ಲಕ್ಷಣವಲ್ಲ. ನಮ್ಮ ಪರಿಸ್ಥಿತಿಯನ್ನು ನೋಡಿದಲ್ಲಿ ಅವೆಂಕ್ಯ ಸ್ವಲ್ಪಕಂತ್ಯವು ಬರುತ್ತಲೂ, ಅಮೇರಿಕಾದಲ್ಲಿ ದಕ್ಷಿಣ ಭಾಗಕ್ಕೂ ಉತ್ತರಭಾಗಕ್ಕೂ ಯುದ್ಧವು ಏರ್ಪಟ್ಟಿತು. ಹಾಗೆಯೇ ಇಂದೋನೇಶಿಯೋ, ಏಶಿಯ! ದೇಶವನ್ನು ವಿಭಜಿಸಿದ ಜಿನ್ನಾ ಸಾಹೇಬರೇ ಜಿಕ್ಕಭಾರತಕ್ಕೆ ತಳಕದಿ ಹಾಕುತ್ತಿರುವದರಲ್ಲಿ ಆಶ್ಚರ್ಯವಿರುವುದಿಲ್ಲ

ಂ ಂ

ತಿಂಡಿಯು ಮುಖ್ಯವೇ, ಪ್ರಿಂಟಿಂಗು ಪ್ರೆಸ್ಸು ಮುಖ್ಯವೇ' ಎಂಬ ಪ್ರಶ್ನೆಗೆ ಉತ್ತರವು, ಶ್ರೀ ರಾಮನಾಥ ಗೆಳೆಯರಂಕಾರನಂತೆ ಬಸೋಟಾ ಹೋಟಲಿನ ಕೇಸಿನಲ್ಲಿ ಪ್ರೆಸ್ಸೇ ಮುಖ್ಯವೆಂದು ತೀರ್ಪುಸಪಾಗಿರುವುದು ತುಂಬಾ ಆಶ್ಚರ್ಯಕರವಾದ ವಿಚಾರ. (ಮೂ. ಭೂ)

ತಾ || 24-11-47 || ಶ್ರೀ || ಸಂ. 63

"ಪ್ರಬೋಧ"

ಮೈಸೂರು ದೇಶೀಯ ವರ್ಣಾಶ್ರಮ ಸ್ವರಾಜ್ಯ ಸಂಘದ
ಬೋಧಪತ್ರದ ಸಪ್ತಾಹಿಕ ಪ್ರಕಟನಮಾಲೆ

ಸಂಪಾದಕ ; ಗುಂಡ್ಮಿ ಮಹಾಬಲಭಟ್ಟ, ವೇದಾಂತಶಿರೋಮಣಿ ವೇಗಾರಶವಿಶಾರದ
ಸಂಘದ ಕಾರ್ಯದರ್ಶಿ, ದೂರ್ವಾಸಪುರಂ, ಶಿವಮೊಗ್ಗಾ ಜಿಲ್ಲಾ

ಜಾತಿವ್ಯವಸ್ಥೆಯ ಭವಿಷ್ಯ

(ಆಚಾರ್ಯ ಪೀಠಾಧಿಪತಿ ಶ್ರೀ ರಾಘವಾಚಾರ್ಯ ಸ್ವಾಮಿಗಳು)

(ಮುಂದುವರಿದುದು)

ಜಾತಿಗೂ ಜನ್ಮಕ್ಕೂ ಸ್ವಭಾವಶಯಾ ಸಂಬಂಧವಿದೆ. ಆದ್ದರಿಂದ ಯಾವುದೇ ಜಾತಿಗೆ ಅದರ ಕರ್ತವ್ಯವನ್ನು ಬಿಡುವ ಅಧಿಕಾರವಿಲ್ಲ. ಸಮ್ಮ ಧರ್ಮಶಾಸ್ತ್ರ, ಸಮಾಜ ಶಾಸ್ತ್ರ, ಅರ್ಥ ಶಾಸ್ತ್ರ ಮುಂತಾದವು ಹೀಗೆ ಹೇಳುತ್ತದೆ. ಗುಣಕರದ ಜಾತಿಯಾಗುವುದಲ್ಲ ಮತ್ತು ಬದಲಿಸುವುದಿಲ್ಲ ಪ್ರತಿಯೊಬ್ಬ ವ್ಯಕ್ತಿಯೂ ಅವನು ತನ್ನ ಜಾತಿಧರ್ಮವನ್ನು ಪಾಲಿಸಿದಾಗಲೇ ಸನ್ಮಾನಕ್ಕೆ ಅಧಿಕಾರಿಯಾಗುವನು. ಒಂದು ವೇಳೆ ಬ್ರಾಹ್ಮಣನೊಬ್ಬನು ಬ್ರಾಹ್ಮಣ ಧರ್ಮವನ್ನು ಪಾಲಿಸುವುದಿಲ್ಲವಾದರೆ, ಅವನು ಸನ್ಮಾನಕ್ಕೆ ಯೋಗ್ಯನಲ್ಲ. ಇದೇ ಪ್ರಕಾರ ಚಂಡಾಲನು ಒಂದು ವೇಳೆ ತನ್ನ ಜಾತಿಧರ್ಮವನ್ನು ಪಾಲಿಸುವುದಾದರೆ ಅವನು ಸನ್ಯಾನಕ್ಕೆ ಯೋಗ್ಯನು. 'ಚಂಡಾಲಪಪಿ ವೃತ್ತಸ್ಥಂ ತಂ ದೇವಾ ಬ್ರಾಹ್ಮಣಂ ವಿದುಃ'. ಯಾವ ಚಾಂಡಾಲನು ತನ್ನ ಜಾತಿಧರ್ಮದಲ್ಲಿ ನೆಲೆಸಿರುವನೋ ಅವನನ್ನು ದೇವತೆಗಳು ಬ್ರಾಹ್ಮಣನೆಂದೆಣಿಸುವರಂತೆ ಬ್ರಾಹ್ಮಣ ಶಬ್ದವು ಇಲ್ಲಿ ಸನ್ಮಾನ ಭಾವನೆಯನ್ನೂ ಪ್ರದರ್ಶಿಸುವುದಕ್ಕಾಗಿ ಪ್ರಯುಕ್ತವಾಗಿದೆ ಚಾಂಡಾಲನು ತನ್ನ ಜಾತಿ ಧರ್ಮವನ್ನು ತೊರೆದು ಬ್ರಾಹ್ಮಣ ಧರ್ಮವನ್ನು ಅನುಷ್ಠಿಸುವುದರಿಂದ ಬ್ರಾಹ್ಮಣನೆನಿಸಲಾರನು. ಅಂದರೆ ಅವನ್ನು ಸನ್ಮಾನವನ್ನು ಹೊಂದಲಾರನು. ಜಾತಿ ಭೇದದ ಕಾರಣ ಒಂದು ವ್ಯಕ್ತಿವಿಶೇಷವು ಸನ್ಮಾನಕ್ಕೆ ಯೋಗ್ಯವಾದುದಲ್ಲ. ಆದರೆ ಸ್ವಜಾತಿ ಧರ್ಮದ ಅನುಷ್ಠಾನದಿಂದ ಪ್ರತಿಯೊಬ್ಬ ವ್ಯಕ್ತಿಯೂ ಸನ್ಮಾನಕ್ಕೆ ಅಧಿಕಾರಿಯಾಗುವುದು ಬ್ರಾಹ್ಮಣನು ಉಚ್ಚನೂ ಅಲ್ಲ, ಶೂದ್ರನು ನೀಚನೂ ಅಲ್ಲ ಎಲ್ಲರೂ ತಮ್ಮ ಧರ್ಮವನ್ನು ಪಾಲಿಸಿದಲ್ಲಿ ಉಚ್ಚರು. ಮತ್ತು ಪಾಲಿಸದಿದ್ದಲ್ಲಿ ನೀಚರು. ಪಾರಂಪರಿಕ ಸದ್ಭಾವನೆಯನ್ನು ಸ್ಥಾಪಿಸಿ ಜಾತಿ ವ್ಯವಸ್ಥೆಯನ್ನು ಸ್ವೀಕರಿಸುವುದು ತಮ್ಮ ಅಭ್ಯುದಯಕ್ಕೆ ಸಾಧನವಾಗಿದೆ. ಆದುದರಿಂದ ಹಿಂದಿನಿಂದ ಸಂಬಂಧವಾದ ಜಾತಿಧರ್ಮವನ್ನು ಪಾಲಿಸುವುದು ಅತಿ ಅವಶ್ಯಕವಾದ ಆವಶ್ಯಕತೆ ಇದೆ. ಇದು ಸನಾತನಧರ್ಮ. ಇದರ ಪಾಲನೆಯಿಂದ ನಮ್ಮ ರಾಷ್ಟ್ರದ ಭವಿಷ್ಯವು ಉಜ್ವಲವಾಗುವುದು ಹಾಗೂ ನಾವು ಶ್ರೇಯಸ್ಸನ್ನು ಪಡೆಯಬಲ್ಲೆವು.

ಭೋಜನಕ್ಕೆ ದೊರೆಯದಾಗ ಭಜನವೇ ಗತಿ

ಆದಿಭೌತಿಕ ಜಗತ್ತಿನ ಸಂಪೂರ್ಣ ಗತಿ ವಿಧಿಯು ಆಧ್ಯಾತ್ಮಿಕ ಜಗತ್ತಿಗೆ ಅಧೀನವಾಗಿರುತ್ತದೆ. ಸ್ಥೂಲ ಜಗತ್ತಿನ ನಿಯಂತ್ರಣವು ಸೂಕ್ಷ್ಮ ಜಗತ್ತಿಗೆ ಅಧೀನವಾಗಿರುತ್ತದೆ. ಸ್ಥೂಲ ಶರೀರದ ಮೇಲೆ ಸೂಕ್ಷ್ಮ ಮನಸ್ಸಿನ ನಿಯಂತ್ರಣವು ಸ್ಪಷ್ಟವಾಗಿ ಕಂಡುಬರುತ್ತಿರುವುದರಿಂದಲೇ ಇದು ಸ್ಪಷ್ಟವಾಗುತ್ತದೆ. ಸ್ಥೂಲ-ಸೂಕ್ಷ್ಮ, ಸಮಷ್ಟಿ-ವ್ಯಷ್ಟಿ, ಆಧಿಭೌತಿಕ-ಆಧ್ಯಾತ್ಮಿಕ ಮುಂತಾದ ಸಂಪೂರ್ಣ ಜಗತ್ತಿನ ಮೇಲೆ ಆದಿದೈವಿಕ ಜಗತ್ತಿನ ನಿಯಂತ್ರಣವು ನಡೆಯುತ್ತಾ ಇರುತ್ತದೆ.

ವಸುಧೈಯು ತನ್ನ ಅಸ್ತ್ರಬಲ, ಶಸ್ತ್ರಬಲ, ಸೈನಿಕ, ಸಂಘಟನೆ, ಮುಂತಾದ ಬಲಗಳ ಹೆಮ್ಮೆಯಲ್ಲಿ ದೇವರನ್ನು ಮರೆತುಬಿಡುತ್ತಾನೆ. ನೀರಿನ ತೆರೆಯು ಗರ್ವದಲ್ಲಿ ನೀರನ್ನು ಮರೆತುಬಿಟ್ಟು, ನೀರಿಂದಲೆ ಯಾವುದು ಎಲ್ಲಿದೆ ? ಎಂದು ಹೇಳುವಂತೆ ಉಚ್ಚೃಂಖಲನಾಗಿ ಧರ್ಮವನ್ನು ವಿರೋಧಿಸಹತ್ತುತ್ತಾನೆ ಕಟಕ ಮುಕುಟ ಕುಂಡಲಾದಿಗಳು ತಮ್ಮ ವಿಫಲ ಕಾರಣವೇ ಆದ ಸುವರ್ಣವನ್ನು ಮರೆತುಬಿಡುವಂತೆ ಮನುಷ್ಯನು ತನ್ನ ಪ್ರಿಯತಮ, ಪ್ರಾಣಧನ, ಪರಮಪ್ರೇಮಾಸ್ಪದನಾದ ಭಗವಂತನನ್ನು ನೆನಪು ಬಿಟ್ಟು ಆತನ ಶಾಸ್ತ್ರವನ್ನೂ ತದುಕ್ತ ಧರ್ಮವನ್ನೂ ಅಲ್ಲಗಳೆಯುತ್ತಾನೆ. ಪ್ರತಿಯೊಂದು ಕಾರ್ಯದಲ್ಲಿಯೂ ಅವನಿಗೆ ತನ್ನ ಬುದ್ಧಿಯುದೇ ಪೌರುಷವೂ ಪರಾಕ್ರಮವೂ ಗೋಚರಿಸಲಾರಂಭಿಸುವುವು. ದೇವರ ಕೃಪೆಯಿಂದ ಅಸುರರ ಮೇಲೆ ವಿಜಯವನ್ನು ಗಳಿಸಿಕೊಂಡಾಗ ದೇವತೆಗಳಿಗೂ ಹೆಮ್ಮೆ ಉತ್ಪನ್ನವಾಗಿಬಿಟ್ಟಿದ್ದಿತು. ಆದರೆ ತೃಣವನ್ನು ಸಹ ಸುಡುವ ಅಥವಾ ಅತ್ಯಲ್ಪ ಉಲುಗಿಸುವ ಶಕ್ತಿಯು ಅಗ್ನಿ ಮತ್ತು ವಾಯುಗಳಂತಹ ಮಹಾಶಕ್ತಿಗಳಲ್ಲಿ ಕಂಡುಬಾರದೇ ಹೋಗಲು ಆಗ ಸಂಪೂರ್ಣ ಶಕ್ತಿಯೂ ವಿಶ್ವಪತಿಯಾದ ಭಗವಂತನದೇ ಎಂದು ತಿಳಿದು ಕೊಳ್ಳಲ್ಪಟ್ಟಿತು. ಯಾವ ರೀತಿ ಪದ್ಮಿನಿಯ ಬೀಸಣಿಗೆಗಳ, ಕಾರ್ಖಾನೆಗಳ ಕಾರ್ಯಕಲಾಪವೂ. ವಿದ್ಯುದ್ದೀಪದಲ್ಲಿನ ಪ್ರಕಾಶವೂ ವಿದ್ಯುದ್ಗೃಹದೊಂದಿಗೆ ಅವುಗಳ ಸಂಬಂಧವಿರುವವರೆಗೆ ಮಾತ್ರ ಇರಲು ಶಕ್ತವಾಗಿ ಅದುಂದ ಸಂಬಂಧ ತಪ್ಪುತ್ತಲೇ ಎಲ್ಲದರ ಕಾರ್ಯಕಲಾಪವೂ ಪ್ರಕಾಶವೂ ಸಂಪೂರ್ಣವಾಗಿ ಹೇಗೆ ಮುಗಿದುಹೋಗುವುದೋ, ಅದೇ ರೀತಿ ದೇವರೊಂದಿಗೆ ಸಂಬಂಧವಿರುವಾಗ ಎಲ್ಲರಲ್ಲಿ ಎಲ್ಲ ಶಕ್ತಿಗಳೂ ಕೆಲಸ ಗಯ್ಯುತ್ತವೆ. ಅತನ ಸಂಬಂಧ ಕಡಿಯುತ್ತಲೇ ಸರ್ವಶಕ್ತಿಗಳೂ ಅಸ್ತಂಗತವಾಗುತ್ತವೆ. ಇದಕ್ಕಾಗಿ ಆಗಾಗ ಪ್ರಕೃತಿಯು ಮನುಷ್ಯನ ಅಧಿಮಾನವನ್ನು ಹೆಮ್ಮೆಯನ್ನೂ ಪುಡಿಮಾಡುವುದಕ್ಕಾಗಿ ಪೆಟ್ಟುಕೊಡುತ್ತಿರುತ್ತದೆ.

ಮನುಷ್ಯನ ಪೆಟ್ಟುಗಳನ್ನು ಸರಿಗೊಳಿಸುವುದಕ್ಕಾಗಿ ಇಂದು ಬೇರೆಬೇರೆ ವಾದಗಳ ಕಾದಾಟವು ತನ್ನ ಮೇರೆಯನ್ನು ವಿಸ್ತರಿಸುತ್ತಾ ಇದೆ. ಈಶ್ವರವಾದ ಹಾಗೂ ಧರ್ಮವಾದಗಳನ್ನು ಹೊಡೆದಟ್ಟಿ, ಸಾಮ್ಯವಾದ ಪ್ರಜಾತಂತ್ರ ಫೆಸಿಸ್ಟ್ ವಾದಗಳು ಹೆಚ್ಚುತ್ತಿದೆ. ದೇವರು ಮತ್ತು ಧರ್ಮಗಳು ಅನಾವಶ್ಯಕವೆಂದು ಮಾತ್ರವೇ ಅಲ್ಲ. ಅವುಗಳನ್ನು ಮನ್ನಿಸುವವರು ಕೂಡ ಮೂರ್ಖರೆಂದೆಣಿಸಲ್ಪಡತೊಡಗಿರುವರು. ಈಶ್ವರೀಯ ನಿಯಮಗಳನ್ನು ಅಂದರೆ ಶಾಸ್ತ್ರಗಳನ್ನು ಉಲ್ಲಂಘಿಸುವುದರಲ್ಲಿಯೇ ವೀರತನವು ತೋರಿಬರುತ್ತಿದೆ. ಹೇಗಾದರೂ ಮಾಡಿ ಇತರ ತಂಡಗಳನ್ನು ಹಿಮ್ಮೆಟ್ಟಿಸಿ ತನ್ನ ಪಾರ್ಟಿಯು ಏಕಾಧಿಪತ್ಯ ಶಾಸನಸ್ಥಾಪಿಸಸಾಗುತ್ತಿವೆ.

|| ಸಶೇಷ

ಧರ್ಮ ಯುದ್ಧದ ಡೈರಿ

ತಾ || ೨೬—೬—೪೭ ನೇ ದಿನ ಬೆಳಿಗ್ಗೆ, ೪೬ ದಿವಸಗಳಿಂದ ಅನವರತ ನಡೆಯುತ್ತಿದ್ದ ಶ್ರೀ ಲಕ್ಷಚಂಡೀ ಮಹಾ ಯಾಗದ ಪೂರ್ಣಾಹುತಿಯೂ ಅವಭೃತಸ್ನಾನವೂ ಅತ್ಯಂತ ಸಮಾರೋಹದಿಂದ ಸಂಪನ್ನವಾಯಿತು. ಧರ್ಮ ಯುದ್ಧದ ೬೩ ನೇ ಸೇನಾಪತಿ ಶ್ರೀ ಚಂದ್ರಶೇಖರಶಾಸ್ತ್ರಿಗಳ (ಹರಿದ್ವಾರ) ನೇತೃತ್ವದಲ್ಲಿ ೨೮ ಧರ್ಮವೀರರ ೫ ತಂಡಗಳು ನಿರ್ದಿಷ್ಟ ಸ್ಥಳದಲ್ಲಿ ಧರ್ಮಾಗ್ರಹ ಹೂಡಿ ಸೆರೆ ಹಿಡಿಯಲ್ಪಟ್ಟವು. ಇಂದು ಸಾಯಂಕಾಲ ವಿಶೇಷಾಧಿವೇಶನದ ಅಂತಿಮ ಒಹಿರಂಗ ಸಭೆ ನಡೆಯಿತು. ಅವರಶಹೀದ್ ಶ್ರೀ ಸ್ವಾಮಿ ಕೃಷ್ಣಾನಂದ ತೀರ್ಥರ ಸ್ಮಾರಕವನ್ನು ದಿಲ್ಲಿಯಲ್ಲಿ ಮಾಡಿಸುವ ನಿಶ್ಚಯವಾಯಿತು.

ತಾ || ೨೭—೬—೪೭ ನೇ ದಿನ ೬೪ ನೇ ಸೇನಾಪತಿ ಋಷಿಕೇಶದ ಶ್ರೀ ಮಾಯಾರಾಮ ವೇದಪಾಠಿಗಳ ನಾಯಕತ್ವದಲ್ಲಿ ೨೦, ಮತ್ತು ೬೫ ನೇ ಸೇನಾಪತಿ ವೃಂದಾವನದ ಶ್ರೀ ಭೀಮಸೇನ ಶರ್ಮ ವೇದಾಚಾರ್ಯರ ನೇತೃತ್ವದಲ್ಲಿ ೨೭ ಧರ್ಮವೀರರ ತಂಡಗಳು ಸೆಕ್ರೆಟೆರಿಯೆಟ್ ಭವನದಲ್ಲಿ ಧರ್ಮಾಗ್ರಹ ಹೂಡಿ ಬಂಧಿಸಲ್ಪಟ್ಟವು.

ತಾ || ೨೮—೬—೪೭ ನೇ ದಿನ ೬೬ ನೇ ಸೇನಾಪತಿ ಶ್ರೀ ಗೌರೀಶಂಕರ ಶಾಸ್ತ್ರಿ 'ಅಕಿಂಚನ'ರ ನೇತೃತ್ವದಲ್ಲಿ ೧೯ ಧರ್ಮವೀರರ ೩ ತಂಡಗಳು ಸೆಕ್ರೆಟೆರಿಯೆಟ್ ಭವನದಲ್ಲಿ ಧರಣಿ ನಡೆಸುತ್ತಾ ಬಂಧಿತವಾದವು. ನಿನ್ನೆ ಧರಣಿ ನಡೆಸಿದ ೫೦ ಧರ್ಮವೀರರ ಪೈಕಿ ೧೦ ಮಂದಿಯನ್ನು ಜೈಲಿಗೆ ಕಳುಹಿಸಿ ಉಳಿದ ೪೦ ಜನರನ್ನು ಕಾಡಿಗಟ್ಟಿದರು.

ತಾ || ೨೯—೬—೪೭ ನೇ ದಿವಸ ೬೭ ನೇ ಸೇನಾಧ್ಯಕ್ಷ ಅಯೋಧ್ಯೆಯ ಶ್ರೀ ಒಲರಾಮದಾಸರ ನೇತೃತ್ವದಲ್ಲಿ ೧೯ ಧರ್ಮವೀರರ ೪ ತಂಡಗಳು ಧರಣಿ ನಡೆಸಿ ಹಿಡಿಯಲ್ಪಟ್ಟವು. ನಿನ್ನೆ ಹಿಡಿಯಲ್ಪಟ್ಟ ೧೯ ಧರ್ಮವೀರರಲ್ಲಿ ೧೨ ಮಂದಿಯನ್ನು ಜೈಲಿಗೆ ಸೇರಿಸಿ ಮಿಕ್ಕವರನ್ನು ಅಡವಿಗೊಯ್ದುಬಿಟ್ಟರು.

ಗೂಂಡಾಗಳ ದುಂಡಾವ

ಪ್ರಜೆಗಳ "ಬಚಾವೋ" ಸೇನೆ

ತಮ್ಮ ದೇಶದ ಮೇಲೆ ಗೂಂಡಾಗಳೋ ಶತ್ರುಗಳೋ ದಂಡೆತ್ತಿ ಬಂದಲ್ಲಿ ಯಾವ ಸ್ವಾರ್ಥಕಂಕ್ಷ ಪಿಪಾಸೆಯುಳ್ಳ ಪ್ರಜೆಗಳೂ ಕೈಗಳನ್ನು ಜೋಡಿಸಿಕೊಂಡು ಕೂತುಕೊಳ್ಳುವುದಿಲ್ಲ. ಈ ವಿಷಯವನ್ನು ಕಾಶ್ಮೀರದ 'ಬಚಾವೋ ಸೇನೆಯವರು' ತೋರಿಸಿರುವರು.

'ತಮ್ಮ ಪ್ರಾಣವನ್ನಾದರೂ ತ್ಯಜಿಸಿ ದೇಶವನ್ನು ರಕ್ಷಿಸಿಕೊಳ್ಳಬೇಕು' ಎಂದು ಗಾಂಧಿಯವರು ಹೇಳಿರುವರು.

'ಲೋಕತ್ರಯಗಳು ನೀಲಕೆಳಗಾದರೂ ಕಾಶ್ಮೀರವನ್ನು ರಕ್ಷಿಸುವೆನು' ಎಂಬುದು ನೆಹ್ರೂಜಿಯವರ ಧೈರ್ಯಪ್ರಬೋಧೆ.

'ಮಾತೃದೇಶದ ರಕ್ಷಣೆಗಾಗಿ ಕೊನೆಯ ಮನುಷ್ಯನವರೆಗೂ ಎದುರಿಸಿ ನಿಲ್ಲುವೆವು' ಎಂಬುದು ಕಾಶ್ಮೀರದ ಕೇಸರಿಯು ಘರ್ಜಿಸಿತು.

ಮಾತೃದೇಶದ ರಕ್ಷಣೆಗಾಗಿ ಜಾತಿ ಮತ ಬೇಧವನ್ನು ಲಕ್ಷಿಸದೆ ಹಿಂದೂ ಮುಸ್ಲಿಂ, ಸಿಕ್ ಪ್ರಜೆಗಳು ಒಂದಾಗಿ ನಿಂತು ಗುಂಡಾಗಳನ್ನು ಅದ್ಭುತ ರೀತಿಯಲ್ಲಿ ಎದುರಿಸಿದರು

ಬಚಾವೋ ಸೇನೆಯ ಸಮಯೋಚಿತ ಕಾರ್ಯವು ಸ್ತುತ್ಯವು! ಸ್ತುತ್ಯವು. ಸ್ತುತ್ಯವು! (ಜ್ವಾ)

ಇದು ಧರ್ಮಾವರದ ಸಮಾಚಾರ ಅಲ್ಲಿಗೆ ಹತ್ತಿರದ ಗ್ರಾಮದಿಂದ ಸಾಂತೆಗೆ ಹೆಂಡವ್ಯಾಪಾರಿಗಳಾಗಿ ಗ್ರಾಮಸ್ಥರು ಹಣವನ್ನು ಬಹಿಷ್ಕರಿಸಿದರು. ಒಬ್ಬ ರಡ್ಡಿ ಪ್ರಮುಖನು ಇದನ್ನು ಕಂಡು ಕೋಪಗೊಂಡು ತನ್ನ ಸೇವಕರಿಂದ ಅವರನ್ನು ಒದಿಸಿ, ಬಲವಂತದಿಂದ ಅವರ ಬಾಯಿಯೊಳಗೆ ಹೆಂಡವನ್ನು ಹುಯ್ಯಿಸಿದನು.

ಂ ಂ

ಟೋಕಿಯೊ ನ 18— ಜಪಾನಿನಲ್ಲಿ 'ಗುಪ್ತ ಸರಕಾರ' ಎಂಬ ರಹಸ್ಯ ಮತ್ತು ಒಳಸಂಚು ತಂಡವೊಂದು ಅಲ್ಲಿಯ ಸರಕಾರಕ್ಕೂ, ಅಕ್ರಮಿತ ಸೈನ್ಯಕ್ಕೂ ಛೇತಿಯುಂಟಾಗಿದೆಯಂತೆ.

ನೆಹರು ಸರ್ಕಾರ ಉರುಳಿಸುವ ಪ್ರಯತ್ನ ?

ಪಾಟಿಯಾಲ ರಾಜರನ್ನು ತರಲು ಒಳಸಂಚು !

ಮುಖ್ಯ ವಾರ್ತೆಗಳು

ನಾರ್‌ಕಿಂಗ್ ನ 18— ಫರ್ಮೋಸಾ ನೆರೆಹಾವಳಿಯಿಂದ 32 ಸಾವಿರ ಮಂದಿ ಮನೆಮಠವಿಲ್ಲದಂತಾದರು.

ಂ ಂ

ಹೈದರಾಬಾದು ನ 18 — ಸಿಕಂದರಾಬಾದಿನಲ್ಲಿ ಗೂಂಡಾಗಳ ಹಾವಳಿ ವಿಪರೀತವಾಗಿದ್ದು ಈ ಹಾವಳಿ ತಪ್ಪಿಸಲು ಕೇಂದ್ರ ಸಾರ್ವಜನಿಕರು ನೈಜಾಮರಲ್ಲಿ ಮನವಿ ಮಾಡಿದ್ದಾರೆ

ಂ ಂ

ಶ್ರೀ ರಾಜೇಂದ್ರ ಪ್ರಸಾದರು ಕಾಂಗ್ರೆಸ್ ಪ್ರೆಸಿಡೆಂಟರಾದರು. ಕೇಂದ್ರ ಸರಕಾರದಲ್ಲಿ ಮಂತ್ರಿ ಪದವಿ ಬಿಡುತ್ತಾರೆ. ಆದರೆ ರಾಜ್ಯಾಂಗ ಸಭಾ ಅಧ್ಯಕ್ಷತೆಯನ್ನು ಹೊಂದಿರುತ್ತಾರೆ.

ಂ ಂ

ತಿರುಪ್ಪೂರು ನ 17 — ನೂಲು ಸಂಘದವರು ಮತ್ತು ಸರಕಾರದವರು ನಡೆಸುತ್ತಿರುವ ಖಾದಿ ಕೇಂದ್ರದಲ್ಲಿ ಈ ವಾರದೊಳಗೆ ತಮಗೆ ಕೆಲಸ ಒದಗಿಸದಿದ್ದಲ್ಲಿ ತಾವು ಸತ್ಯಾಗ್ರಹ ಹೂಡುವುದಾಗಿ 3 ಸಾವಿರ ನೆಯ್ಗೆಯವರು ತಿಳಿಸಿಬಿಟ್ಟಿರುವರು.

ಂ ಂ

ಬಳ್ಳಾರಿಯಲ್ಲಿ ಉದ್ಯೋಗವನ್ನು ಕೊಡುವ ಆಶೆ ತೋರಿಸಿ ಒಬ್ಬ ಕ್ರೈಸ್ತ ಉಪಾಧ್ಯಾಯನನ್ನು ಮುಸ್ಲಿಂ ಮತಕ್ಕೆ ಸೇರಿಸಿಕೊಂಡಿದು.

ಂ ಂ

ಪಾಟ್ನಾ ವಿಶ್ವವಿದ್ಯಾಲಯದವರು ಶ್ರೀ ರಾಜೇಂದ್ರ ಪ್ರಸಾದ್. ಅಬ್ದುಲ್ ಕಲಾಂ ಆಜಾದರಿಗೆ ಡಾಕ್ಟರ್ ಆಫ್ ಲಿಟರೇಚರ್ ಪಟ್ಟವನ್ನು ಕೊಡಲು ನಿರ್ಧರಿಸಿರುವರು. ಬೀಹಾರು ಮುಖ್ಯ ಮಂತ್ರಿ ಸಿಂಹಾರವರಿಗೂ, ಆರ್ಥಿಕ ಮಂತ್ರಿ ಅನುಗ್ರಹ ನಾರಾಯಣ ಸಿಂಹರಿಗೂ, ಮಾಜಿ ಉಪಾಧ್ಯಕ್ಷರಾದ ಸಚ್ಚಿದಾನಂದ ಸಿಂಹರಿಗೂ ಡಾಕ್ಟರ್ ಆಫ್ ಲಿರೇಚರ್ ಬಿರುದನ್ನು ಕೊಡಲಿಳಿಸಿರುರು.

ಪಿತೂರಿ

ಕಡಪಾ ಡಿಸ್ಟ್ರಿಕ್ಟ್ ಕಮ್ಯೂನಿಸ್ಟ್ ಮಹಾಜಭೆಯಲ್ಲಿ ಕಾಂರೇಡು ಟಿ. ಕೆ. ರಾಮಸ್ವಾಮಿಯವರು ಹೀಗೆ ಹೇಳಿದರು— ದೇಶದಲ್ಲಿ ನಡೆಯುತ್ತಿರುವ ಮತ ಕಲಹಗಳಿಗೆ ಕಾರಣರು ಬ್ರಿಟಿಷರು, ಅವರ ಬೆಂಬಲವುಳ್ಳ ಸಂಸ್ಥಾನಾಧೀಶರು ಜವಾಬ್ದಾರರು. ಪಂಡಿತ ನೆಹರೂರವರ ಸ್ಥಾನದಲ್ಲಿ ಪಾಟಿಯಾಲಾ ಮಹಾರಾಜರನ್ನು ದೆಹಲಿಗದ್ದುಗೆ ಮೇಲೆ ಏರಿಸಲು ತಂತ್ರಗಳು ನಡೆಯುತ್ತಿವೆ. ಮತ್ತೊಂದು ಕಡೆ ಕಾಶ್ಮೀರದಲ್ಲಿ ಮತ ಪ್ರಭುತ್ವವನ್ನು ಏರ್ಪಡಿಸಲು ಪಾಕೀ ಸ್ತಾನ್ ಯುದ್ಧಗಳಸ್ಥಿತಿಗಳನ್ನು ಏರ್ಪಡಿಸುತ್ತಿದೆ. ಈ ಪರಿಸ್ಥಿತಿಯಲ್ಲಿ ದೇಶದಲ್ಲಿ ಶಾಂತಿಯನ್ನು ನೆಲೆಗೊಳಿಸಿ ರಾಷ್ಟ್ರೀಯ ಸರಕಾರವನ್ನು ಬಲಗೊಳಿಸಬೇಕೆಂದಲ್ಲಿ ಬಾಧ್ಯತೆಯು ಜನಗಳ ಮೇಲಿದೆ. [ಜ್ವಾ

ನೈಜಾಮರ ಭೂತರ್ಜತನವನ್ನು ಣಗಿಸೆಲು ಸತ್ಕಾರಾದಲ್ಲಿ 1942 ರಲ್ಲಿ ಪ್ರತಿ ಸರಕಾರವನ್ನು ಏರ್ಪಡಿಸಿದ್ದವರು. ಸರ್ಕಾರವು ತನ್ನ ಸಹಾಯವನ್ನು ಕೋರಿಂದಲ್ಲಿಸಿದ್ದವಾಗಿರುವುದಾಗಿ ತಿಳಿಸಿದ್ದಾರೆ.

ಂ ಂ

ನವದೆಹಲಿ ಪ್ರಾರ್ಥನಾ ಸಭೆಯಲ್ಲಿ ಗಾಂಧೀಜಿ ಮಾಡಿದ ಭಾಷಣದಲ್ಲಿ ಸಿಕ್ ಮತ್ತು ಹಿಂದು ಕರ್ತವ್ಯ ಬಗ್ಗೆ ನುಡಿಯುತ್ತ ಪಾಕೀಸ್ತಾನಕ್ಕೆ ನಿರ್ಗಮಿಸಿರುವ ಮುಸ್ಲಿಂರು ಮತ್ತೆ ಭಾರತಕ್ಕೆ ಆಗಮಿಸಲಿ ಎಂದರು.

ಂ ಂ

ಕಾಶ್ಮೀರದಲ್ಲಿ ಕೋಮುವಾರು ಕೂಟಗಳಿರುವುದನ್ನು ಸಹಿಸಲು ಅಸಾಧ್ಯ ಎಂದು ಷೇಕ್ ಅಬ್ದುಲ್ಲ ಹೇಳಿದ್ದಾರೆ.

ಂ ಂ

ತುಮಕೂರಿನ ಹೈಸ್ಕೂಲ್ ವಿದ್ಯಾರ್ಥಿಗಳ ಮುಷ್ಕರ ನಿನ್ನೆಯಿಂದ ನಿಂತಿತು. ವಂದೇಮಾತರಂ ಹಾಡುವಂತೆಯೇ ಟಾಗೂರರ ಮತ್ತು ಇಕ್ಬಲರ ಗೀತೆಗಳನ್ನು ಹಾಡಬೇಕೆಂದು ಒಪ್ಪಂದವಾಯಿತು.

ಅಳಿಯ ಕೊಂದ ಪಾಪ ಆರು ತಿಂಗಳಲೆ ಕಾಣುವುದು-

3 ನೇ ಯುದ್ಧಕ್ಕೆ

ಇವು ಕಾರಣಗಳಾಗಲಾರವೆ ?

1 ಫ್ರಾನ್ಸಿನ ಮುನಿಸಿಪಲ್ ಚುನಾವಣೆಗಳಲ್ಲಿ ಡಿಗಾಲು ಪಕ್ಷದವರು ಗೆದ್ದಿರುವಿಕೆ.

2 ಐರ್ಲೆಂಡಿನಲ್ಲಿ ಡಿವೆಲರಾ ಪಕ್ಷವು ಸೋತಿರುವಿಕೆ.

3 ಇಂಗ್ಲೆಂಡಿನ ಮುನಿಸಿಪಲ್ ಚುನಾವಣೆಯಲ್ಲಿ ಕಂಸರ್ವೆಟಿವ್ ಪಂಗಡ ಗೆದ್ದಿರುವಿಕೆ.

4 ಹೈದರಾಬಾದು ರಾಯಭಾರಕ್ಕೆ ಕೊನೆಯಿಲ್ಲದಿರುವಿಕೆ.

ಜಪಾನಿನ ರಾಜಮನೆತನದ ಸದಸ್ಯರಿಗೆ ಪೆನ್ಷನ್ ಕೊಡುವ ಬಗ್ಗೆ ವರ್ಷಕ್ಕೆ 750 ಸಾವಿರ ಪೌನುಗಳಿಂತ ಹೆಚ್ಚು ಮೊಬಲಗನ್ನು ಆ ಸರಕಾರ ಖರ್ಚು ಮಾಡುತ್ತಿದೆ

ನವದೆಹಲಿ, ನ 19 — ಹೈದರಾಬಾದಿನ ಒಗ್ಗೆ 28 ನೇ ತಾರೀಖು ದಿನವೇ ಕಡೆಯತೆಂದು ಪಟೇಲ್ ಹೇಳಿದ್ದಾರೆ.

ಕಲ್ಕತ್ತಾದ ಚೌರಂಗಿಯಲ್ಲಿರುವ ಪ್ರಸಿದ್ಧ ಕಲ್ಕತ್ತಾ ಮ್ಯೂಸಿಯಮ್ಮನ್ನು ಇದೀಗ ತೆರೆಯಲಾಗಿದೆ. ಕಳೆದ ಆರು ವರ್ಷಗಳಿಂದ ಇದು ಮುಚ್ಚಲ್ಪಟ್ಟಿತ್ತು. ಪೌರ್ವಾತ್ಯ ದೇಶದಲ್ಲಿ ಅತಿ ಪ್ರಸಿದ್ಧ ವಸ್ತು ಸಂಗ್ರಹಾಲಯವಿದು.

ಜರ್ಮನಿಯ ಸ್ತ್ರೀಯರು ಗಂಡಂದಿರಿಗಾಗಿ ಜಾಹಿರಾತು ಪ್ರಕಟಿಸುತ್ತಿರುವರು.

ಬೊಂಬಾಯಿ ಸರಕಾರದವರು ಧಾರವಾಡ ಜಿಲ್ಲೆಯಲ್ಲಿ ಜಹಗೀರದ ಅಂಗಡಿಯವರು ಹಾಲು ಉಪಯೋಗಿಸುವದರ ಒದಲು ಹಾಲಿನ ಪುಡಿ ಉಪಯೋಗಿಸಲು ತಕ್ಕದ್ದೆಂದು ಆಜ್ಞೆ ಮಾಡಿದ್ದಾರೆ.

ನವಹಲಿ ನ 18— ಭಾರತ ರಾಜ್ಯಾಂಗಸಭೆಯು ಮುಸ್ಲಿಂ ಲೀಗು ಸದಸ್ಯರು ಎಂದೆ ಡೆಲ್ಲಿಯ ರಾಷ್ಟ್ರೀಯ ಮುಸ್ಲಿಮ್ಮರು ಕಪ್ಪು ಬಾವುಟ ಪ್ರದರ್ಶಿಸಿ, ಲೀಗ್ ಮೆಂಬರುಗಳೆಲ್ಲ ಸಭೆಗೆ ರಾಜೀನಾಮೆ ಕೊಟ್ಟು ಪಾಕಿಸ್ತಾನಕ್ಕೆ ಹೋಗಿಬಿಡಿರೆಂಬ, ಮತ್ತು ಮಿ || ಜಿನ್ನರ ನ್ಯಾಯ ಕತ್ವವನ್ನು ಖಂಡಿಸಿ ಘೋಷಣೆ ಮಾಡಿದ್ದರು.

ಅಖಿಲ ಭಾರತ ರಾಷ್ಟ್ರೀಯ ಮಹಾ ಸಭೆಯ (ಕಾಂಗ್ರೆಸ್ಸಿನ) ಮಹಾಧಿವೇಶನವನ್ನು ಮುಂದಿನ ಜನವರಿ ಕಡೆಯೊಳಗೆ ನಡೆಸುವಂತೆ ಏ ಐ ಸಿ ಸಿ ಯಲ್ಲಿ ನಿರ್ಣಯವಾಯಿತು.

— REVIEW —

We have pleasure in acknowledging the receipt of the Special Number of the Mysore Information Bulletin, issued in connection with the Mysore Constitutional Reforms in Mysore State, Edited by the Publicity Officer to Govt., Mr. G. V. Rajaratnam, M. A.

This Issue contains, besides the Mysore Agreement and the Proclamations issued by H. H. the Maharaja re Constitutional Reforms. a lot of interesting and insrtuctive articles relating to the Industrial, Agricultural, Sericultural, Educational, Geological and other developments in the State. This bulletin is worth a perusal by everyone. It is specially interesting to those who have the welfare of the State at heart,

Photos of H. H. The Maharaja, the new Ministers, Gold Mining. Brindavan introduced in the Bulletin add to the beauty and usefulness of the publication.

'ಬಹಳ ಭಾರೀ ತಲೆ'

ರಾಜಾಜಿಯನ್ನು ವರ್ಣನೆ ಮಾಡುತ್ತಾ ಸಪ್ರಸಿದ್ಧ ಬೊಂಬಾಯಿ ಪತ್ರಿಕೋದ್ಯೋಗಿ ಡಿ. ಎಫ್. ಕಂಕಾರವರು ತಮಾಷೆಯಾಗಿ 'ಈತನ ದೇಹದಲ್ಲಿ ತಲೆಯೆಂಬ ಅಂಗವು ಅತ್ಯಂತ ಅಭಿವೃದ್ಧಿಯನ್ನು ಹೊಂದಿದೆ ಎಂದು ತಿಳಿಸಿದರು.

ರಾಜಾಜಿ ಮದರಾಸಿನ ಪ್ರಧಾನಿಯಾಗಿ ತನ್ನ ಪ್ರಭಾವವನ್ನು ಬೀರಿದನು. ಅ. ಭಾ. ಕಾಂಗ್ರೆಸ್ಸು ಕವಿಟಿಗೆ ಮೆದಳಿನಂತೆ ಕೆಲಸವಾಡುತ್ತಾ ಎರಡನೆಯ ಸೋಪಾನವಾಗಿ ಕೇಂದ್ರಸರಕಾರದಲ್ಲಿ ಸಪ್ಲೈ ಶಾಖಾ ಮಂತ್ರಿಯಾಗಿ ಕೆಲ ದಿನಗಳಿದ್ದನು. ತರುವಾಯ ಪಶ್ಚಿಮ ಬಂಗಾಳದ ಗೌರ್ನರಾಗಿ ನಿಯಮಿಸಲ್ಪಟ್ಟನು. ಈ ತಿಂಗಳು 19 ರಿಂದ 24 ರವರೆಗೆ ಆಕ್ಟಿಂಗು ಗೌರ್ನರುಜನರಲ್ಲಾಗಿದ್ದಾರೆ. ಖಾಯಂ ಗೌ || ಜಿ|| ಆಗುವ ಸಂಭವವಿದೆ.

ಸತ್ಯವಾದಿ

ಸೋಮವಾರಸಂಚಿಕೆ ವಾರ್ಷಿಕಚಂದಾ ಪರಸ್ಥಳಕ್ಕೆ ಅಂಚೆವೆಚ್ಚ ಸೇರಿ 1-12-0

ಉಡುಪುಗಳನ್ನು ಅತಿ ಚೊಕ್ಕಟವಾಗಿ ಒಗೆದು

— ಶುಭ್ರಮಾಡುವ ಸಾಧಕ —

ಮೈಸೂರು ಸಾಬೂನನ್ನು ಉಪಯೋಗಿಸಿದ ಹೊರತು, ಆಶ್ಚರ್ಯಕರವಾದಷ್ಟು ಮಟ್ಟಿಗೆ ಅದರಲ್ಲಿ ಅಡಗಿರುವ ನಿರ್ಮಲೀಕರಣಶಕ್ತಿಯನ್ನು ತಿಳಿಯಲಾರಿರಿ

ಈ ಸಾಬೂನನ್ನು ಇವತ್ತು ಉಪಯೋಗಿಸಿ ನೋಡಿ;
ಅದರ ಪ್ರತಿಫಲವನ್ನು ಕಂಡು ನೀವೇ ಬೆರಗಾಗುವಿರಿ.



ಮೈಸೂರು
ಸಾಬೂನು

ಕೊಳಕು ಬಟ್ಟೆಗಳನ್ನು
ಸ್ವಚ್ಛಗೊಳಿಸುವುದು

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು

ಐ ಟಿ ಯಾ ಲ್

ಟ್ರೇಡ್ ITL ಮಾರ್ಕ್

ಏಟಿಯಾಲ್ ಒಂದು ಅದ್ಭುತ ಕ್ರಿಮಿನಾಶಿನಿ. ಗೊತ್ತಾದ ಪ್ರಮಾಣದಲ್ಲಿ ನೀರಿನೊಡನೆ ಬೆರಿಸಿ, ಗಾಯಗಳನ್ನು ತೊಳೆಯುವುದು, ಬಾಯಿಲೆಯವರ ಕೊಠಡಿಗಳನ್ನು ತೊಳೆಯುವುದು, ಬಟ್ಟೆಗಳನ್ನು ಒಗೆದು ಶುಚಿ ಮಾಡುವುದು, ಇತ್ಯಾದಿ ಕೆಲಸಗಳಿಗೆ ನೆರವಾಗುವ ಸಂಸಾರ ಸೇವಕ.

ಹಿತವಾದ ಇದರ ವಾಸನೆಯು ಮನಸ್ಸನ್ನು ಹರ್ಷಗೊಳಿಸುವುದು.

ಎಲ್ಲಾ ಪ್ರಮುಖ ಔಷಧಿವ್ಯಾಪಾರಿಗಳಲ್ಲಿಯೂ ಸುಲಭ ಬೆಲೆಗೆ ದೊರೆಯುವುದು.

— ತಯಾರಿಕರು —

The Mysore Industrial & Testing Laboratory Ltd..
Malleswaram P. O. Bangalore

ಶ್ರೀ 'ಓಂ' ಗುರುತಿನ

ಅರಿಸಿದ 'ಪರಿಶುದ್ಧ ಕೇಸರಿ

ಈ ಶ್ರೀ ಓಂ ಗುರುತಿನ ಕೇಸರಿಯು ಗ್ಯಾರಂಟಿಯಾಗಿ ಪರಿಶುದ್ಧವಾದುದು. ಸ್ಪೇನ್ ದೇಶದಲ್ಲಿಯು ಕೇಸರಿ ಗಿಡಗಳಿಂದ ಅರಿಸಲ್ಪಟ್ಟ ಹೂಗಳಿಂದ ಕಿತ್ತಲ್ಪಟ್ಟು ಅರಿಸ ತೆಗೆಯಲ್ಪಟ್ಟಿದಾಗಿದೆ. ಇದರಲ್ಲಿ ಏನೆಂದು ಆಕ್ಷೇಪಣೀಯ ಪದಾರ್ಥವೂ ಸೇರಿಲ್ಲ ಮತ್ತು ಧಾರ್ಮಿಕವಾಗಿಯೂ ಪರಿಶುದ್ಧವಾದುದು. ದೇವಾಲಯಗಳಲ್ಲಿಯೂ ದೇವರ ಪೂಜೆಗೂ ಮತ್ತಾಚಾರ ಸಮಾರಂಭಗಳಲ್ಲಿಯೂ [illegible] ದ್ದಾಗಿದೆ. ಎಂದು ಶಿಫಾರಸ್ ಮಾಡಲ್ಪಟ್ಟಿದೆ

ವಲ್ಲಭದಾಸ್ ತೇಜ್‌ಪಾಲ್

(ಹಿಂಗು. ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು

SHAKTI
SUDHA
A Superb TONIC